## ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿಯವರ ನ್ಯಾಯಾಲಯ ಪೊನ್ನಂಪೇಟೆ.

**ಕ್ರಿ.ಮೊ.ಸಂಖ್ಯೆ.464/2024**

| | | |
|---|---|---|
| **ಪಿರ್ಯಾದಿ** | : | ದಿ. ಚೀಫ್ ಎಕ್ಸಿಕ್ಯೂಟೀವ್ ಆಫೀಸರ್,<br>ಪಿ.ಎ.ಸಿ.ಸಿ.ಎಸ್ ಲಿ.,<br>ಶ್ರೀಮಂಗಲ ಶಾಖೆ, ಶ್ರೀಮಂಗ,<br>ಪ್ರತಿನಿಧಿಸುವವರು, ಶ್ರೀ ಎಸ್.ಬಿ.ಎತ್ತಿರಾಜ್,<br>ಪೊನ್ನಂಪೇಟೆ ತಾಲ್ಲೂಕು, ಕೊಡಗು. |
| | | **ವಿರುಧ್ದ** |
| **ಆರೋಪಿ** | : | ಶ್ರೀ ಡಿ.ಎಮ್.ಪ್ರವೀಣ್ ಕುಮಾರ್,<br>ತಂದೆ: ಮಣಿ, ಪ್ರಾಯ: 41 ವರ್ಷ,<br>ವಾಸ: ಶ್ರೀಮಂಗಲ ಗ್ರಾಮ ಮತ್ತು ಅಂಚೆ,<br>ಪೊನ್ನಂಪೇಟೆ ತಾಲ್ಲೂಕು, ಕೊಡಗು ಜಿಲ್ಲೆ. |

### ದಂಡ ಸಂಹಿತೆ ಪ್ರಕ್ರಿಯೆ ಕಲಂ 313 ರಡಿಯಲ್ಲಿ ಆರೋಪಿಯ ಹೇಳಿಕೆ

**ಪ್ರಶ್ನೆ ಸಂಖ್ಯೆ-1:** ಪಿರ್ಯಾದಿಯ ಪರ ಇದುವರೆಗೂ ನುಡಿದ ಎಲ್ಲಾ ಸಾಕ್ಷ್ಯಗಳನ್ನು ಆಲಿಸಿದ್ದೀರಾ?

ಉ: ಹೌದು

**ಪ್ರಶ್ನೆ ಸಂಖ್ಯೆ-2:** ಪ್ರಾ.ಸಾ:**1** ಶ್ರೀ ಪಿ.ಆರ್ ಜೀವನ್, ಪಿರ್ಯಾದುದಾರರು, ಇವರು ತಮ್ಮ ಸಾಕ್ಷ್ಯದಲ್ಲಿ ನುಡಿಯುತ್ತಾ, ಆರೋಪಿಯಾದ ನೀವು ಶ್ರೀ.ವಿಘ್ನೇಶ್ವರ ಸ್ವಸಹಾಯ ಗುಂಪಿನ ಎರಡನೇ ಪ್ರತಿನಿಧಿಯಾಗಿದ್ದು, ದೂರುದಾರರಿಂದ ಸ್ವಸಹಾಯ ಸಂಘದ ಸಾಲವನ್ನು ಪಡೆದಿದ್ದು, ಬ್ಯಾಂಕ್ ನಿಯಮಗಳ ಪ್ರಕಾರ ನಿಯಮಿತವಾಗಿ ಮೊತ್ತವನ್ನು ಪಾವತಿಸುವುದಾಗಿ ಭರವಸೆ ನೀಡಿರುತ್ತೀರಿ, ಸದರಿ ಸಾಲದ ಹಣದ ಮರುಪಾವತಿಗಾಗಿ ಆರೋಪಿಯಾದ ನೀವು ನಿಮ್ಮ ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ, ಶ್ರೀಮಂಗಲ ಶಾಖೆಯ ದಿ:**22.01.2024**ರ ರೂ.**3,97,856/-** ಮೊತ್ತದ **082386** ಸಂಖ್ಯೆಯ ಚೆಕ್ ಅನ್ನು ಸಾಲದ ಬಾಧ್ಯತೆಗಾಗಿ ನೀಡಿದ್ದು, ನಂತರ ದಿ.**23,01.2024** ರಂದು ಪಿರ್ಯಾದಿದಾರರು ಸದರಿ ಚೆಕ್ ಅನ್ನು ನಗದೀಕರಣಕ್ಕಾಗಿ ತಮ್ಮ ಬ್ಯಾಂಕಿಗೆ ಹಾಜರು ಪಡಿಸಿದಾಗ ಸದರಿ ಬ್ಯಾಂಕಿನವರು ದಿ:**23.01.2024** ರಂದು "**Funds Insufficient** ಎಂದು ಹಿಂಬರಹ ನೀಡಿರುತ್ತಾರೆ. ನಂತರ ಪಿರ್ಯಾದುದಾರರು ತಮ್ಮ ವಕೀಲರ ಮುಖಾಂತರ **15** ದಿನಗಳೊಳಗೆ ಚೆಕ್ ಹಣವನ್ನು ಹಿಂದಿರುಗಿಸುವಂತೆ ದಿ:**21.02.2024** ರಂದು ಕಾನೂನು ರೀತಿಯ ನೋಟೀಸನ್ನು ನೀಡಿದ್ದರೂ ಸಹ ನೀವು ಚೆಕ್ ಮೊತ್ತವನ್ನು ನಿಗದಿತ ಸಮಯದಲ್ಲಿ ಪಿರ್ಯಾದುದಾರರಿಗೆ ಕೊಡದೇ ಮೋಸ ಮಾಡಿದ್ದು ಅವರು ನಿಮ್ಮ ವಿರುದ್ಧ ದೂರನ್ನು ನೀಡಿ ಸೂಕ್ತ ಕಾನೂನು ಕ್ರಮ ಜರುಗಿಸಬೇಕೆಂದು ಮತ್ತು ಸಾಕ್ಷಿಯು ನಿ.ಪಿ.1 ಚೆಕ್ಕನ್ನು, ನಿ.ಪಿ.2 ಬ್ಯಾಂಕ್ ಮೆಮೋವನ್ನು, ನಿ.ಪಿ.3 ವಕೀಲರ ಮೂಲಕ ನೀಡಿದ ನೋಟೀಸನ್ನು, ನಿ.ಪಿ.4ಅಂಚೆ ರಶೀದಿಯನ್ನು ಮತ್ತು ನಿ.ಪಿ.5 ಅಂಚೆ ಸ್ವೀಕೃತಿಯನ್ನು ಗುರುತಿಸಿ ಸಾಕ್ಷ್ಯವನ್ನು ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರ: ಸುಳ್ಳು

D.M Praveen

**ಪ್ರಶ್ನೆ ಸಂಖ್ಯೆ-3:** ಈ ಪ್ರಕರಣದಲ್ಲಿ ನಿಮ್ಮ ಪರವಾಗಿ ಸಾಕ್ಷ್ಯ ವಿಚಾರಣೆ ಅಥವಾ ದಾಖಲಾತಿ ಹಾಜರುಪಡಿಸಲು ಬಯಸುವಿರಾ?

ಉತ್ತರಃ ಇಲ್ಲ

**ಪ್ರಶ್ನೆ ಸಂಖ್ಯೆ-4:** ಈ ಪ್ರಕರಣದಲ್ಲಿ ನೀವೇನಾದರೂ ಹೇಳಬಯಸುವಿರಾ?

ಉತ್ತರಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಮೇಲಿನ ಪ್ರಶ್ನೆಗಳನ್ನು ಆರೋಪಿಗೆ ಓದಿ ವಿವರಿಸಿದ ನಂತರ ಆತನು ನೀಡಿದ ಉತ್ತರಗಳನ್ನು ದಿಃ29.05.2026 ರಂದು ನನ್ನಿಂದ ದಾಖಲು ಮಾಡಿಕೊಳ್ಳಲಾಯಿತು)

29.5.26.

ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,
ಪೊನ್ನಂಪೇಟೆ.

ಸ್ಥಳಃ ಪೊನ್ನಂಪೇಟೆ,
ದಿನಾಂಕಃ 29.05.2026

D.M Praveen